ಕೊಡಗು ಜಿಲ್ಲೆಯಲ್ಲಿ ಸಣ್ಣ ನೀರಾವತಿ ಯೋಜನೆಗಳು

311(292) ಶ್ರೀ ಕೆ. ಎಸ್. ಮಾದಪ್ಪ(ಮಡಕೇರಿ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1997-98 ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಯಲ್ಲಿ ತೊಡಗಿಸಲಾಗಿರುವ ಹಣವೆಷ್ಟು?

ಆ) ಕೊಡಗಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಅಗತ್ಯವಾಗಿರುವ ಕಛೇರಿ ಮತ್ತು ವಾಹನ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) 39.84 ಲಕ್ಷ ರೂ.ಗಳು

ಆ) ಸಣ್ಣ ನೀರಾವರಿ ಉಪ ವಿಭಾಗ ಕಛೇರಿ ತೆರೆಯಲಾಗಿದೆ. ವಾಹನ ಸೌಲಭ್ಯ ಕಲ್ಪಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಚಿಕ್ಲಿ ಹೊಳೆ ಅಣೆಕಟ್ಟು ಕುರಿತು

312(291) ಶ್ರೀ ಡಿ. ಎಸ್. ಮಾದಪ್ಪ(ಮಡಕೇರಿ) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಚಿಕ್ಲಿ ಹೊಳೆ ಅಣೆಕಟ್ಟಿನ ನಿರ್ಮಾಣಕ್ಕೆ ಸರ್ಕಾರ ಇಲ್ಲಿಯವರೆಗೆ ಖರ್ಚು ಮಾಡಿದ ಮೊತ್ತವೆಷ್ಟು

ಆ) ಚಿಕ್ಲಿ ಹೊಳೆ ಅಣೆಕಟ್ಟಿನ ನಿರ್ಮಾಣದಿಂದ ಎಷ್ಟು ಎಕರೆವಾರು ಪ್ರದೇಶಗಳು ನೀರಾವರಿಯ ಪ್ರಯೋಜನ ಪಡೆಯುತ್ತಿದೆ.

ಇ) ಅಣೆಕಟ್ಟಿನ ನಿರ್ಮಾಣದ ಒಟ್ಟು ಮೌಲ್ಯವೆಷ್ಟು.

ಈ) ಈ ಅಣೆಕಟ್ಟು ಎಷ್ಟು ವರ್ಷದ ಅವಧಿಯ ಯೋಜನೆ (ವಿವರ ನೀಡುವುದು)

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :

ಅ) ಫೆಬ್ರವರಿ 1998ರ ಮಾಹೆಯ ಅಂತ್ಯದವರೆಗೆ ಈ ಯೋಜನೆಗಾಗಿ 327. 18 ಲಕ್ಷಗಳನ್ನು ವೆಚ್ಚ ಮಾಡಿರುತ್ತದೆ.

An amount of Rs. 327.18 lakh end of the Feb 98 has been include for the construction of C.R.P

ಆ) ಸದರಿ ಯೋಜನೆಯಡಿ ಉದ್ದೇಶಿಸಲಾದ 865 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ.